ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಕಾ.ಪಾ.ಅ(ವಿಜ.ನ)/ಪಿ.ಆರ್/ 14 /2014-15

ಕಾರ್ಯಪಾಲಕ ಅಭಿಯಂತರರು ರವರ ಕಛೇರಿ ವಿಜಯನಗರ
ವಿಭಾಗ, ಬೃ.ಬೆಂ.ಮ.ಪಾಲಿಕೆ
3ನೇ ಮುಖ್ಯ.ರಸ್ತೆ, ಶಾಸಕರ ಭವನ 1ನೇ ಮಹಡಿ,
ವಿಜಯನಗರ 1ನೇ ಹಂತ,
ಬೆಂಗಳೂರು-560040. ದಿನಾಂಕ: 31.1.15

ಕಾರ್ಯಾದೇಶ

ವಿಷಯ:- ವಾರ್ಡ್ ಸಂಖ್ಯೆ:132ರ ಅತ್ತಿಗುಪ್ಪೆಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಪೌರ ಕಾರ್ಮಿಕರನ್ನು ಹಾಗೂ ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:- 1.ಮಾನ್ಯ ಉಚ್ಚನ್ಯಾಯಾಲಯದ ರಿಟ್ ಪಿಟಿಷನ್ 24739/2013ರಂತೆ.
2. ಮಾನ್ಯ ಆಯುಕ್ತರ ಅನುಮೊದನೆ ದಿ:28.11.2014.
3. ಜಂಟಿ ಆಯುಕ್ತರು(ದಕ್ಷಿಣ)ರವರ ಅನುಮೋದನೆ ದಿ:24.01.2015.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್-132ರ ಅತ್ತಿಗುಪ್ಪೆಯಲ್ಲಿ ಇಲಾಖಾ ವತಿಯಿಂದ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ವಿಲೇವಾರಿ ನಿರ್ವಹಿಸಲು ದಿ:01.02.2015 ರಿಂದ ಅನ್ವಯವಾಗುವಂತೆ ನಿರ್ವಹಿಸಲು ಮಾತಾ ಶ್ರೀ ಕ್ಲೀನ್ ಅಂಡ್ ಗ್ರೀನ್, ರವರಿಗೆ ಪ್ರತಿ ಮಾಹೆಗೆ ರೂ.17,95,406/-ಗಳಂತೆ ಮುಂದಿನ ಆದೇಶದವರೆಗೆ ಅಥವಾ ಟೆಂಡರ್ ಪ್ರಕಟಣೆಗೊಳ್ಳುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಯಾವುದೇ ರೀತಿಯ ಸಾರ್ವಜನಿಕರ ದೂರುಗಳಿಗೆ ಆಸ್ಪದ ನೀಡದಂತೆ ಕೆಳಕಂಡ ಷರತ್ತುಗಳನ್ವಯಿಸಿ ಅಗತ್ಯವಿರುವ ಕೆಳಕಂಡ ಪೌರಕಾರ್ಮಿಕರು ಮತ್ತು ವಾಹನಗಳನ್ನು ಕೂಡಲೇ ಸರಬರಾಜು ಮಾಡಲು ತಿಳಿಸಿದೆ.

Sl. No.	Particulars	Qty	Unit Rate in Rs	Total cost in Rs
1.	Poura Karmika's	50	9592.00 + 1001.00	5,29,650.00
2.	Supervisor's	5	9885.00 + 1001.00	54,430.00
3.	Auto Tipper	16	28,511.00 + 2002.00	4,88,208.00
4.	Compactor	2	1,21,944.00 + 2002.00	2,47,892.00
5.	Pk's with Pushcart	46	9330.00 + 1001.00	4,75,226.00
	TOTAL Rs.			17,95,406.00

ಮು.ತಿ.ನೋಡಿ.,

ಷರತ್ತುಗಳು

1. ಸರಬರಾಜು ಆದೇಶ ತಲುಪಿದ ಒಂದು ವಾರದೊಳಗೆ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ, ಪಿ.ಎಫ್ ಹಾಗೂ ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ ಮಾಹೆ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸಿ ದಾಖಲಾತಿ ಒದಗಿಸುವುದು.
2. ಸರಬರಾಜುಗೊಳಿಸುವ ಪೌರ ಕಾರ್ಮಿಕರುಗಳ ಜೊತೆಯಲ್ಲಿ ಅಗತ್ಯವಿರುವ ಸಲಕರಣೆಗಳನ್ನು ನೀಡುವುದು.
3. ವಾಹನ ಚಾಲಕರು ಬಾರಿ ವಾಹನ ಚಾಲನೆಯ ಪರವಾನಗಿ ಕಡ್ಡಾಯವಾಗಿ ಹೊಂದಿರತಕ್ಕದ್ದು.
4. ನೀವು ಸರಬರಾಜುಗೊಳಿಸುವ ಪೌರಕಾರ್ಮಿಕರನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ ನೌಕರರೆಂದು ಪರಿಗಣಿಸತಕ್ಕದ್ದಲ್ಲ.
5. ನೀವು ಸರಬರಾಜುಗೊಳಿಸಿದ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗೂ ಸದರಿ ವಾಹನಗಳ ರಿಪೇರಿಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.
6. ಘನತ್ಯಾಜ್ಯವನ್ನು ಮೂಲದಲ್ಲೇ (ಹಸಿಕಸ/ಒಣಕಸವನ್ನಾಗಿ) ಬೇರ್ಪಡಿಸಿ ವಿಲೇವಾರಿ ಮಾಡುವುದು ಕಡ್ಡಾಯವಾಗಿರುತ್ತದೆ.
7. ಒಣತ್ಯಾಜ್ಯವನ್ನು ಒಣತ್ಯಾಜ್ಯ ಘಟಕಕ್ಕೆ ಕಡ್ಡಾಯವಾಗಿ ನೀಡುವುದು.
8. ಘನತ್ಯಾಜ್ಯವನ್ನು ಡಂಪಿಂಗ್ ಯಾರ್ಡ್‌ಗೆ ವಿಲೇವಾರಿ ಮಾಡುವ ವಾಹನಗಳು ಕಾಂಪ್ಯಾಕ್ಟರ್‌ಗಳಾಗಿರಬೇಕು. ಹಾಗೂ ವಾಹನಗಳ ಮೇಲ್ಛಾವಣಿ ಕಡ್ಡಾಯವಾಗಿ ಇರಬೇಕು.
9. ಪೌರ ಕಾರ್ಮಿಕರುಗಳಿಗೆ ಎಲ್ಲಾ ಸಲಕರಣೆಗಳನ್ನು ನೀಡುವುದು.

ಈ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ನಿಮ್ಮ ಸರಬರಾಜು ಆದೇಶವನ್ನು ಸ್ಥಗಿತಗೊಳಿಸಲಾಗುವುದು.

ಕಾರ್ಯಪಾಲಕ ಅಭಿಯಂತರರು
ವಿಜಯನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,
ಮಾತಾ ಶ್ರೀ ಕ್ಲೀನ ಅಂಡ್ ಗ್ರೀನ್,
ನಂ.6/13, 17ನೇ ಅಡ್ಡರಸ್ತೆ,
ವಿ.ಎಸ್.ಗಾರ್ಡನ್,
ಬೆಂಗಳೂರು-23.

ಪ್ರತಿಯನ್ನು:-

1. ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆಪ್ತ ಕಾರ್ಯಾಲಯಕ್ಕೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಅಪರ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
3. ಸಹಾಯಕ ಹಣಕಾಸು ನಿಯಂತ್ರಕರು (ದಕ್ಷಿಣ) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು(ಗಾಳಿ ಆಂಜನೇಯಸ್ವಾಮಿ ದೇವಸ್ಥಾನ) ಉಪ-ವಿಭಾಗ ರವರಿಗೆ ರವಾನಿಸುತ್ತಾ, ಅನುಮೋದಿಸಿದ ದರಗಳಂತೆ ಬಿಲ್ಲನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸುವುದು.
5. ಕಛೇರಿ ಕಡತಕ್ಕೆ.